CHIRANTANA
Institute of Introspective Studies

Illuminating Roads to Introspection

ಮಂಕುತಿಮ್ಮನ ಕಗ್ಗ - ಮಾನ್ಯ ಶ್ರೀ ಡಿ. ವಿ. ಗುಂಡಪ್ಪನವರು

	ಕಗ್ಗ	Translation	ಭಾವಾರ್ಥ	ವ್ಯಾಖ್ಯಾನ
01	ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು । ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ ॥ ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ । ಎಲ್ಲರೊಳಗೊಂದಾಗು - ಮಂಕುತಿಮ್ಮ ॥ ೭೮೯ ॥ **Hullāgu beṭṭaḍi, manegē malligeyāgu. kallāgu kaṣṭagaḷa maḷeya vidhi suriye ॥** **bella sakkareyāgu dīna durbalaringe. ellarōḷagondāgu — Mankutimma ॥ 789 ॥** **हुल्लागु बेट्टदडि,** **मनेगे मल्लिगेयागु ।** **कल्लागु कष्टगळ मळेय विधि सुरिये ॥** **बेल्ल सक्करेयागु** **दीनदुर्बलरिंगे ।** **एल्लरोळगोंदागु — मंकुतिम्म ॥ ७८९ ॥**	Be like a blade of grass at the bottom of a mountain. It leads a peaceful life by itself, offers solace to people who hurt their feet while climbing down, it survives winds which even big trees can not. Be like a fragrant flower to your own household. Always spread smiles and happiness. Be like a stone when providence showers rain trouble on you. Be like jaggery and sugar to the weak and people in need of your help. Be one among everybody. - Mankutimma	ನೀನು, ಬೆಟ್ಟದಡಿ ದನಕರುಗಳಿಗೆ ಮೇವಾಗುವಂತಹ ಹುಲ್ಲಾಗು, ನಿನ್ನ ಮನೆಗೆ ಸುವಾಸನಾಭರಿತವಾದ ಮಲ್ಲಿಗೆಯ ಹೂವಂತಾಗು, ವಿಧಿ ನಿನ್ನ ಬದುಕಿನಲ್ಲಿ ಕಷ್ಟಗಳನ್ನು ಮಳೆಯಂತೆ ಸುರಿದರೆ, ನೀ ಕಲ್ಲಂತೆ ಗಟ್ಟಿಯಾಗಿ ಅವುಗಳನ್ನು ಎದುರಿಸು , ದೀನರಿಗೆ ದುರ್ಬಲರಿಗೆ ನೀನು ಬೆಲ್ಲದಂತಾಗು, ಎಲ್ಲರೊಳು ಒಂದಾಗು ಎಂದು ಸ್ವಾರಸ್ಯಕರ ಬದುಕಿನ ಗುಟ್ಟನ್ನು ನಮಗೆ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.	ಜಗತ್ತಿನಲ್ಲಿ ಪ್ರಯೋಜಕರಾಗಿ ಬದುಕಬೇಕು ಎನ್ನುವುದು ನಮ್ಮ ಸಂಸ್ಕೃತಿಯ ಮತ್ತು ಸಂಸ್ಕಾರಗಳ ಆಶಯ. ಆದರೆ ಹೇಗೆ ? ಎನ್ನುವುದೇ ಪ್ರಶ್ನೆ. ಬಹಳಷ್ಟು ಬಾರಿ ನಾವು ' ನಮಗೇ' ಪ್ರಯೋಜನಕಾರಿಯಾಗಿ ವರ್ತಿಸುವುದಿಲ್ಲ, ಹಾಗಿರುವಾಗ ನಾವು ಜಗತ್ತಿಗೆ ಉಪಯೋಗಿಗಳಾಗಿ ಬದುಕುವುದು ಹೇಗೆ? ನಮ್ಮ ಅವಶ್ಯಕತೆಗಳನ್ನು ಕಡಿಮೆ ಮಾಡಿಕೊಂಡರೆ, ನಮ್ಮ ಕ್ಷಮತೆಯ ಕಿಂಚಿತ್ ಭಾಗವನ್ನು ಪರಹಿತಕ್ಕಾಗಿ ಬಳಸಬಹುದು. ಬೆಟ್ಟದಡಿಯ ಹುಲ್ಲು ತನ್ನಷ್ಟಕ್ಕೆ ತಾನು ಬೆಳೆದರೂ ಅದು ದನಕರುಗಳಿಗೆ ಮೇವಾಗುತ್ತದೆಯಲ್ಲಾ, ಆ ರೀತಿ ನಾವೂ ಸಹ ಬದುಕಬೇಕು ಎನ್ನುತ್ತಾರೆ ಡಿವಿಜಿ. 'ಮನೆಗೆ ಮಾರಿ ಪರರಿಗುಪಕಾರಿ' ಎನ್ನುವ ಗಾದೆ ಮಾತಿದೆ. ಹಾಗಲ್ಲದೆ ತನ್ನ ಮನೆಯವರೆಲ್ಲರಿಗೂ ಹಿತವ ನೀಡುತ್ತಾ, ತಾನಿರುವ ಮನೆ, ಸಮಾಜ, ದೇಶ ಮತ್ತು ಜಗತ್ತಿಗೆ, ಮಲ್ಲಿಗೆಯ ಸುಗಂಧದಂತೆ ಇದ್ದರೆ, ಎಲ್ಲರೂ ನಮ್ಮನ್ನು ಇಷ್ಟಪಡುವಂತೆ ಬದುಕಿದರೆ ಅದು ಸುಂದರ ಮತ್ತು ಸಾರ್ಥಕ ಬದುಕಾಗುತ್ತದೆ. ಇನ್ನು ಕಷ್ಟಗಳು ಬಾರದ ಜೀವಿ ಈ ಜಗತ್ತಿನಲ್ಲಿ ಇರಲಿಕ್ಕೆ ಸಾಧ್ಯವಿಲ್ಲ. ಆದರೆ ಆ ಕಷ್ಟಗಳ ಭಾರದಿಂದ ಕುಗ್ಗುವವರೇ ಹೆಚ್ಚು. ಹಾಗೆ ಕುಗ್ಗಿದ ಮನಸ್ಸು ಸಕ್ರಿಯಾತ್ಮಕವಾಗಿಲ್ಲದೆ, ಬಾಡಿದಾಗ ಜೀವನ ನೀರಸವಾಗುತ್ತದೆ. ಹಾಗೆ ಕುಗ್ಗದೆ ಬಂದದ್ದನೆಲ್ಲಾ ಅನುಭವಿಸಿಯೇ ತೀರಿಸುತ್ತೇನೆ ಎಂದು ಮನಸ್ಸನ್ನು ಕಲ್ಲಿನಂತೆ ಗಟ್ಟಿಯಾಗಿಸಿ, ಮಾನಸಿಕ ಸಂತುಲನೆಯನ್ನು ಕಳೆದುಕೊಳ್ಳದೆ ದೃಢವಾಗಿ ಮತ್ತು ಧೈರ್ಯವಾಗಿ ನಿಂತರೆ, ಎಂತಹ ಕಷ್ಟಗಳನ್ನೂ ಎದುರಿಸುವ, ಅನುಭವಿಸುವ ಮತ್ತು ಗೆದ್ದು ಹೊರಬರುವ ಸಾಧ್ಯತೆಗಳು ಅಧಿಕ. ಅದಕ್ಕೊಂದು ಮಾರ್ಗವಿದೆ. ನಮ್ಮ ಕಷ್ಟವನ್ನು ನಮಗಿಂತ ತೀರ ಹೀನ ಗತಿಯಲ್ಲಿರುವ ದೀನರ ಮತ್ತು ದೈನ್ಯರ ಕಷ್ಟಗಳಿಗೆ

				ಹೋಲಿಸಿಕೊಂಡಾಗ, ನಮ್ಮದು ಗೌಣವಾಗುತ್ತದೆ. ಅಂತಹವರಿಗೆ ಆಸರೆಯಾಗಿ, ಆಶ್ರಯವಾಗಿ ನಿಂತಾಗ ಅವರಿಗೆ ನಾವು' ಇರುವೆಗಳಿಗೆ ಬೆಲ್ಲದಂತೆ' ಅವರಿಗೆ ಸನ್ನಿಹಿತರಾಗಬಹುದು ಮತ್ತು ಸವಿಯನ್ನು ಹಂಚಬಹುದು. ಹೀಗೆಲ್ಲಾ ಆಗಬೇಕಾದರೆ, ' ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು- ಸರ್ವಜ್ಞ' ಎಂದು ವಚನಕಾರ ಸರ್ವಜ್ಞ ಹೇಳಿದಂತೆ ನಾವು ಎಲ್ಲರೊಳಗೆ ಒಂದಾಗಬೇಕು. ಸ್ವಹಿತಗಳನ್ನು ಬದಿಗಿರಿಸಿ ಪರಹಿತದ ಕಾರ್ಯಗಳನ್ನು ಮಾಡಿ, ' ಆತ್ಮವತ್ ಸರ್ವ ಭೂತೇಷು' ಎನ್ನುವಂತೆ, ಏಕಾತ್ಮಭಾವದಿಂದ ಪರರ ಸಂತೋಷವನ್ನು ನಮ್ಮ ಸಂತೋಷವೆಂದುಕೊಳ್ಳುತ್ತಾ, ಪರರ ನೋವನ್ನು ಹಂಚಿಕೊಳ್ಳುತ್ತಾ 'ಎಲ್ಲರೊಳಗೆ ಒಂದಾಗಿ' ಬದುಕಿದರೆ ಒಂದು ಧನ್ಯತೆಯ ಭಾವ ನಮ್ಮ ಮನಸ್ಸಿಗೆ ಬಂದು, ತುರೀಯಾವಸ್ಥೆಯ ಆನಂದವನ್ನು ಪಡಬಹುದು. ಆದರೆ ಸ್ವಾರ್ಥಕ್ಕಾಗಿಯೇ ಪರರಿಗೆ ನೋವನ್ನುಂಟುಮಾಡುವ, ಸ್ವಹಿತ ರಕ್ಷಣೆಗಾಗಿಯೇ ಪರರನ್ನು ಅನುಸರಿಸುವ ಮತ್ತು ಪರರ ಆನಂದದಲ್ಲಿ ತಮ್ಮ ಸಂತೋಷವಿರುವಂತೆ ನಟಿಸುವ ಜನರೇ ಅಧಿಕವಾಗಿರುವ ಇಂದಿನ ಸಮಾಜದಲ್ಲಿ, ಎಲ್ಲರೊಳಗೊಂದಾಗಿ ಬದುಕುವುದು ಕಷ್ಟ. ಹಾಗೆ ಬದುಕಬಯಸುವವರು ಬರುವ ಸಂಕಷ್ಟಗಳನ್ನು ಎದುರಿಸಲು ತಯಾರಾಗಿರಬೇಕು. ಆ ರೀತಿ ಬದುಕಿದರೆ ಅಂತಹ ಬದುಕಿನ ಅಂತ್ಯದಲ್ಲಿ ಖಂಡಿತ 'ಆನಂದ' ಸಿಗುತ್ತದೆ.
02	ತೃಣಕೆ ಹಸಿರೆಲ್ಲಿಯದು? ಬೇರಿನದೆ? ಮಣ್ಣಿನದೆ? । ದಿನಪನದೆ? ಚಂದ್ರನದೆ? ನೀರಿನದೆ? ನಿನದೆ? ॥ ತಣಿತಣಿವ ನಿನ್ನ ಕಣ್ಣಿನ ಪುಣ್ಯವೋ? ನೋಡು । ಗುಣಕೆ ಕಾರಣವೊಂದೆ? - ಮಂಕುತಿಮ್ಮ ॥ ೫೩ ॥	Where did the grass get its green color? Did it get it from its roots? or the soil? Or the Sun? or the Moon? or the water? or from you, the observer? Or is it that your eyes are	ಭೂಮಿಯಲ್ಲಿ ಚಿಗುರುವ ಹುಲ್ಲಿಗೆ ಆ ಹಸಿರುಬಣ್ಣ ಎಲ್ಲಿದ ಬಂತು. ಅದರ ಮೂಲವಾದ ಬೇರಿನದೋ ? ಅದು ಬೆಳೆವ ಭೂಮಿಯದೋ? ಬೆಳಕ ನೀಡುವ ಸೂರ್ಯನದೋ? ಅಥವಾ ಚಂದ್ರನದೋ?	ಹೌದಲ್ಲವಾ? ನಮಗೂ ಇಂತಹ ಪ್ರಶ್ನೆಗಳು ಮನದಲ್ಲಿ ಉದ್ಭವವಾಗಿರಬಹುದು, ಹಲವು ಬಾರಿ. ನಾವು ನೋಡುವ ಪ್ರತಿವಸ್ತುವಿನಲ್ಲೂ ಹಲವು ಸೋಜಿಗಗಳನ್ನು ನಾವು ಕಾಣಬಹುದು. ಆದರೆ ಆ ಸೋಜಿಗಕ್ಕೆ ಒಂದು ಕಾರಣವನ್ನು ಹುಡುಕಲು ನಮ್ಮಿಂದಾಗುವುದಿಲ್ಲ. ಏಕೆಂದರೆ ಒಂದು ಕಾರಣದಿಂದ ಆದಂತ ವಸ್ತುವಾವುದೂ ಈ ಪ್ರಪಂಚದಲ್ಲಿ ಇಲ್ಲವೆಂಬುದೆ ನನ್ನ ಗಟ್ಟಿ

	Tṛṇake hasirelliyadu? **bērinade? maṇṇinade?** **Dinapanade?** **Chandranade?** **nīrinade? ninade? ॥** **Taṇitaṇiva ninna** **kaṇṇina puṇyavō?** **nōḍu.** **Guṇake kāraṇavonde?** **— Mankutimma ॥ 53 ॥** तृणके हसिरेल्लियदु? बेरिनदे? मण्णिनदे? दिनपनदे? चन्द्रनदे? नीरिनदे? निनदे? ॥ तणितणिव निन्न कण्णिन पुण्यवो? नोडु । गुणके कारणवोंदे? — मंकुतिम्म ॥ ५३ ॥	fortunate to see it as pleasing green? Can there be only one source for any quality we find in objects (and people)? - Mankutimma	ಬೆಲೆಗೆ ಪೂರಕವಾದ ನೀರಿನದೋ? ಅಥವಾ ಅದನ್ನು ಬೆಳೆಸಿದ ನಿನ್ನದೋ? ಅಥವಾ ತಂಪ ಕಾಣುವ ನಿನ್ನ ಕಣ್ಣಿನ ಪುಣ್ಯದ್ದೋ? ನೋಡು ನೀ ಆ ಹಸಿರಿನ ಗುಣಕ್ಕೆ ಒಂದೇ ಕಾರಣವೋ? ಮಂಕುತಿಮ್ಮ.	ನಂಬಿಕೆ. ಹಾರುವ ಹಕ್ಕಿಯ ಬಣ್ಣ, ರೆಕ್ಕೆಯ ವಿನ್ಯಾಸ, ಹಾವಿನ ರೂಪ, ಅದರ ಮೈಮೇಲಿನ ಚಿತ್ತಾರಗಳು, ಅಬ್ಬಾ ಎಂತಹ ವಿಚಿತ್ರ. ಇದೊಂದೂ ನಮಗೆ ಅರ್ಥವಾಗುವುದಿಲ್ಲ. ಎಲ್ಲವೂ ವಿಸ್ಮಯ.
03	ಪುಸ್ತಕದಿ ದೊರೆತರಿವು ಮಸ್ತಕದಿ ತಳೆದ ಮಣಿ । ಚಿತ್ತದೊಳು ಬೆಳೆದರಿವು ತರು ತಳೆದ ಪುಷ್ಪ ॥ ವಸ್ತು ಸಾಕ್ಷಾತ್ಕಾರವಂತರೀಕ್ಷಣೆಯಿಂ ದ । ಶಾಸ್ತ್ರಿತನದಿಂದಲ್ಲ - ಮಂಕುತಿಮ್ಮ ॥ ೬೫ ॥ **Pustakadī doretarivu** **mastakadī taḷeda maṇi.** **Chittadoḷu beḷedarivu** **taru taḷeda puṣhpa ॥** **Vastu** **sākṣhātkāravantareekṣ** **haṇeyinda,** **śāstritanadindalla —** **Mankutimma ॥ 65 ॥** पुस्तकदि दोरेतरिवु	Knowledge obtained from reading books is like an ornament on top of the head. It's only external. Knowledge that grows from contemplation, is like a flower on a tree. The realization of the truth can only be attained by looking inwards. Not just by being called "well-educated". - Mankutimma	ಪುಸ್ತಕದಿ ದೊರೆತ ಅರಿವು ಮಸ್ತಕದಿ ತಳೆದ ಮಣಿ ಚಿತ್ತದೊಳು ಬೆಳೆದ ಅರಿವು ತರು ತಳೆದ ಪುಷ್ಪ . ವಸ್ತು ಸಾಕ್ಷಾತ್ಕಾರವು ಅಂತರ್ ವೀಕ್ಷಣೆಯಿಂದ ಶಾಸ್ತ್ರಿತನದಿಂದ ಅಲ್ಲ ಮಂಕುತಿಮ್ಮ.	ಪುಸ್ತಕಗಳನ್ನು ಓದಿ ಪಡೆದುಕೊಂಡ ಪಾಂಡಿತ್ಯ ತಲೆಯಮೇಲೆ ತಂದಿಟ್ಟುಕೊಂಡಂತ ಕಿರೀತದಲ್ಲಿನ ಮಣಿಯಂತೆ. ಆದರೆ ನಮ್ಮ ಅನುಭವಗಳನ್ನು ವಿಚಾರದ ಒರೆಗೆ ಹಚ್ಚಿ ನಮ್ಮ ಚಿತ್ತದಲ್ಲಿ ನಮಗೆ ಸ್ಫುರಿಸಿದ ಜ್ಞಾನ, ತನ್ನ ಸ್ವಾಭಾವಿಕ ಗುಣಕ್ಕೆ, ಮಣ್ಣಿನ ಸಾರ, ಪರಿಸರದ ಪ್ರಭಾವದಿಂದ ತನ್ನೊಳಗಿಂದಲೇ ವಿಕಸಿತವಾಗುವ ಒಂದು ಗಿಡದ " ಪುಷ್ಪದಂತೆ" ಎನ್ನುತಾರೆ, ಮಾನ್ಯ ಗುಂಡಪ್ಪನವರು.

	मस्तकदि तळेदमणि । चित्तदोळु बेळेदरिवु तरुतळेदपुष्प ॥ वस्तु साक्षात्कारवन्तरीक्षणेयिन्द, शास्त्रितनदिन्दल्ल — मंकुतिम्म ॥ ६५ ॥			
04	ಶ್ಯಾಮಸುಂದರನವನೆ ಚಕ್ರಿ ನರಹರಿಯಂತೆ । ಸೋಮಶಂಕರನೆ ಭೈರವ ರುದ್ರನಂತೆ ॥ ಹೈಮವತಿ ಶಿವೆ ತಾನೆ ಕಾಳಿ ಚಂಡಿಕೆಯಂತೆ । ಪ್ರೇಮ ಘೋರಗಳೊಂದೆ! - ಮಂಕುತಿಮ್ಮ ॥ ೯೫ ॥ **Śyāmasundaranavane chakri Narahariyante. Sōmaśaṅkarane Bhairava Rudranante ॥** **Haimavati Śive tāne Kāḷi Chaṇḍikeyante. Prēma ghōragaḷonde! — Mankutimma ॥ 95 ॥** श्यामसुंदरनवने चक्रि नरहरियंते । सोमशंकरने भैरव रुद्रनंते ॥ हैमवति शिवे ताने काळि चंडिकेयंते । प्रेम घोरगळोंदे! - मंकुतिम्म ॥ ९५ ॥	Shyamasundara (beautiful and dark - krishna) is none other than Chakri (the one with divine wheel as a weapon - to kill shishupala) or Narahari (Lion faced man who killed Hiranyakashipu). Lord Shiva is described as Somashekhara (decorated by the moon); also as Bhairava (the frightful) and Rudra (the destroyer). Shiva's wife Parvati - also known as the pleasing Haimavati (daughter of Himavat - the mountain God). She is also the Kali and Chandika; both were her incarnations to kill demons. All this emphasizes that love and ghore are	ಶ್ಯಾಮಸುಂದರನೂ ಅವನೇ, ಚಕ್ರಹಿಡಿದು, ಶಿಶುಪಾಲನನ್ನು ಅಂತಗೊಳಿಸಿದ ಆ ಶ್ರೀ ಕೃಷ್ಣನೂ ಅವನೇ, ತನ್ನ ಕೈ ಉಗುರುಗಳಿಂದ ಹಿರಣ್ಯಕಶಿಪುವನ್ನು ಕೊಂದ ನರಹರಿ ರೂಪದ ನರಸಿಂಹನೂ ಅವನೇ. ಸೌಮ್ಯ ರೂಪದ ಚಂದ್ರ ಶೇಖರನೂ ಅವನೇ, ಉಗ್ರರೂಪದ ಭೈರವನೂ, ರುದ್ರನೂ ಅವನೇ. ಸ್ತ್ರೀ ರೂಪಧರಿಸಿ ಹಿಮವಂತನ ಮಗಳಾದ ಪಾರ್ವತಿಯೂ ಅವನೇ, ಉಗ್ರರೂಪದ ಕಾಳಿ ಚಂಡಿಕೆಯೂ ಅವನೇ. ಹೀಗೆ ಪರಮಾತ್ಮ, ಪುರುಷ, ನರ, ಸಿಂಹ, ಸೌಮ್ಯ ಶ್ಯಾಮನ ರೂಪ ಮತ್ತು ಸ್ತ್ರೀ ರೂಪದಲ್ಲಿಯೂ, ಶಾಂತ, ಮತ್ತು ಪ್ರೇಮ ರೂಪಗಳಲ್ಲಿಯೂ, ಘೋರ ಮತ್ತು ರುದ್ರ ರೂಪದಲ್ಲಿಯೂ ಪ್ರಕಟಗೊಂಡಿದ್ದಾನೆ ಎಂಬುದು ಈ ಕಗ್ಗದ ಹೂರಣ.	ಹಾಗಾದರೆ ಅವರು ಬೇರೆ ಇವರು ಬೇರೆ ಅಲ್ಲವೇ ಎಂದರೆ, ಖಂಡಿತ ಅಲ್ಲ. ಒಂದು ಪರಮ ಶಕ್ತಿ ಹಲವಾರು ರೂಪಗಳನ್ನು ಸಮಯಕ್ಕೆ ಸರಿಯಾಗಿ ಸಂದರ್ಭಕ್ಕೆ ಸರಿಯಾಗಿ ಧರಿಸಿ ತನ್ನ ಲೀಲೆಯನ್ನು ಮೆರೆಯುತ್ತದೆ. ಈ ರೀತಿಯ ಲೀಲಾ ವಿನೋದವನ್ನು ನಾ ಹಿಂದಿನ ಕಗ್ಗದ ವಿವರಣೆಯಲ್ಲೂ ನೀಡಿದ್ದೇನೆ. ಇದಕ್ಕೆ ಪೂರಕವಾಗಿ ವೇದ ಮತ್ತು ಉಪನಿಷತ್ತಿನಲ್ಲೂ ಉಲ್ಲೇಖವುಂಟು. " ನಾರಾಯಣ ಸೂಕ್ತದಲ್ಲಿ" , " ಶಿವಶ್ಚ ನಾರಾಯಣಃ, ಶಕ್ರಶ್ಚ ನಾರಾಯಣಃ" ಎಂದು ಹೇಳಲ್ಪಟ್ಟಿದೆ. ಅಂದರೆ ಆ ಪರಮ ಶಕ್ತಿಯೇ ಎಲ್ಲ ರೂಪಗಳೂ ಎಂದು ಸಿದ್ಧವಾಗುತ್ತದೆ. ವೇದಗಳಲ್ಲಿ ಅತೀ ಪುರಾತನವಾದ ಋಗ್ವೇದದ " ಪುರುಷ ಸೂಕ್ತದಲ್ಲಿ" "ಸ ಬ್ರಹ್ಮ, ಸ ಶಿವಃ, ಸ ಹರಿಃ, ಸೇದ್ರಃ, ಸೋಕ್ಷರಃ ಪರಮಸ್ವರಾಟ್" ಎಂದು ಹೇಳಲ್ಪಟ್ಟಿದೆ. ಆದರೆ ಎಲ್ಲ ರೂಪಗಳೂ ಆ ಪರಮ ಪುರುಷನೇ ಧರಿಸಿ ನಮಗೆ ತನ್ನ ಭಿನ್ನತೆಯನ್ನೂ,ಸಾರ್ವಭೌಮತ್ವವನ್ನೂ, ಏಕತೆಯನ್ನೂ ತೋರಿದ್ದಾನೆಂದು ಅರ್ಥವಲ್ಲವೇ? ಶ್ರೇಷ್ಠ ಭಗವದ್ಭಕ್ತರ ಲಕ್ಷಣವನ್ನು ಹೇಳುವಾಗ " ಶಿವೇ ಚ, ಪರಮೇಶೇ ಚ, ವಿಷ್ಣೌ ಚ ಪರಮಾತ್ಮನಿ ಸಮಬುದ್ಧ್ಯಾ ಪ್ರವರ್ತಂತೆ ತೇವೈ ಭಾಗವತೋತ್ತಮಾಃ" ಎಂದು ಹೇಳಲ್ಪಟ್ಟಿದೆ. ಅಂದರೆ ಯಾರು ಶಿವ ಮತ್ತು ವಿಷ್ಣು ಎಂದು ಬೇಧ ಮಾಡದೆ ಎರಡು ರೂಪದಲ್ಲೂ ಸಮ ಬುದ್ಧಿಯನ್ನುಮತ್ತು ಸಮಭಾವವನ್ನು ಪ್ರದರ್ಶಿಸುತ್ತಾರೋ ಅವರೇ ಶ್ರೇಷ್ಠ ಭಾಗವತರು ಎಂದು ಹೇಳಿದೆ.

		different views of the same underlying essence. - Mankutimma		ವೇದವೇ ಪ್ರಮಾಣ ಎಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ, ವೇದವು ಸತ್ಯವೆಂದೂ ಒಪ್ಪಿಕೊಳ್ಳುತ್ತಾರೆ. ಆದರೂ ನಾವು ವೈಷ್ಣವರು ನಾವು ಶೈವರು, ಇವರು ನಮ್ಮ ದೇವರು ಅವರು ನಿಮ್ಮ ದೇವರು, ನಾವು ನಾಮ ಹಾಕಿಕೊಳ್ಳುತ್ತೇವೆ, ನೀವು ವಿಭೂತಿ ಹಚ್ಚಿಕೊಳ್ಳಿ, ಅವರು ಮುದ್ರೆ ಹಾಕಿಕೊಳ್ಳಲಿ ಎಂದು ಆ ಪರಮಾತ್ಮನಲ್ಲಿ ಇಲ್ಲದ ಬೇಧವನ್ನು ಸೃಷ್ಟಿಮಾಡಿ ನಮ್ಮ ನಮ್ಮೊಳಗೇ ಕಿತ್ತಾಡುವುದು ಕೇವಲ ಅಜ್ಞಾನವಲ್ಲವೇ? ನಾವು ಇಂಥಹ ಅಜ್ಞಾನಕ್ಕೆ ಬಲಿಯಾಗದೆ ಏಕ ರೂಪದ ಆ ಪರಮ ಚೇತನವನ್ನು ಆರಾಧಿಸುತ್ತಾ ನಮ್ಮಲ್ಲಿರುವ ಬೇಧಗಳನ್ನುಅಳಿಸುವ ಪ್ರಯತ್ನವನ್ನು ಮಾಡುವ.
05	ತಲೆಯೊಳಗೆ ನೆರೆದಿಹುವು ನೂರಾರು ಹಕ್ಕಿಗಳು । ಗಿಳಿ ಗೂಗೆ ಕಾಗೆ ಕೋಗಿಲೆ ಹದ್ದು ನವಿಲು ॥ ಕಿಲಕಿಲನೆ ಗೊರಗೊರನೆ ಕಿರಿಚಿ ಕೂಗುತ್ತಿಹುವು । ನೆಲೆಯೆಲ್ಲಿ ನಿದ್ದೆಗೆಲೊ? - ಮಂಕುತಿಮ್ಮ ॥ ೨೦೩ ॥ **Taleyoḷage neredihuvu nūrāru hakkigaḷu.** **Giḷi gūge kāge kōgile haddu navilu ॥** **Kilakilane goragorane kirichi kūguttihuvu.** **Neleyelli niddegelō? — Mankutimma ॥ 203 ॥** तलेयोळगॆ नॆरॆदिहुवु नूरारु हक्किगळु । गिळि गूगॆ कागॆ कोगिलॆ हद्दु नविलु ॥	"In a man's mind he can hear voices of all the birds - parrots, owls, crows, koels, eagles, peacocks. Each one has its own melody or cacophony - just like the voices of his inner mind/conscience. How can he find peace and rest?" - Mankutimma	ನಾವು ಈ ಹಿಂದಿನ ಕಗ್ಗಗಳಲ್ಲಿ ಮನುಷ್ಯನ ಮನಸ್ಸಿನಲಿ ಒಂದೇ ಸಮಯದಲ್ಲಿ ನಡೆಯುವ ಹಲವಾರು ಯೋಚನೆಗಳ ವಿಚಾರ ಮತ್ತು ಮನುಷ್ಯನ ಗುಣಗಳ ಹಲವಾರು ಮುಖವಾಡಗಳ ವಿಚಾರವನ್ನು ನೋಡಿದ್ದೇವೆ. ಒಂದು ಬಾರಿ ಯಾವುದೇ ಮನುಷ್ಯನ ಮಸ್ತಿಷ್ಕದಲ್ಲಿ ಹೊಕ್ಕು ನೋಡಿದರೆ, ನಮಗೆ ಅಲ್ಲಿ ಭಯಂಕರವಾಗಿ ನಡೆಯುವ ಚಿತ್ರ ವಿಚಿತ್ರವಾದ ವಿಚಾರಗಳ ಕುಸ್ತಿಯು ಕಾಣುತ್ತದೆ. ಒಂದರ ಮೇಲೊಂದು ಬೀಳುತ್ತಾ, ಒಂದರೊಂದಿಗೆ ಇನ್ನೊಂದು ಗುದ್ದಾಡುತ್ತಾ, ಕೆಲವು ಸೋಲುತ್ತಾ, ಕೆಲವು ಗೆಲ್ಲುತ್ತಾ, ಸೋತದ್ದು ಮತ್ತೆ ಗೆಲ್ಲುತ್ತಾ, ಗೆದ್ದು	ಒಂದು ಯೋಚನೆ ಹೋದರೆ ಮತ್ತೊಂದು ಆ ಕ್ಷಣವೇ ನುಸುಳುತ್ತದೆ. ಹಾಗೆ ಬಂದು ಹೋಗುವ ಆಲೋಚನೆಗಳನ್ನು ನಾವು ದೂರನಿಂತು ನೋಡಿ, ಅವು ಏಕೆ ಬರುತ್ತವೆ ಎಂದು ಆಲೋಚಿಸಿದರೆ, ನಮಗೆ ಕಾರಣವೇ ತಿಳಿಯುವುದಿಲ್ಲ. ಈ ಮನಸ್ಸೇ ಒಂದು ಚಿತ್ರ ವಿಚಿತ್ರ ಆಲೋಚನೆಗಳ ಗೂಡು. ಇದರಲ್ಲಿ ಕೇಳಿಬರುವ ಶಬ್ಧವನ್ನು ಸುಮ್ಮನಾಗಿಸಲೇ ನಮ್ಮ ಅಪೂರ್ವಜರು ನಮಗೆ ಪೂಜೆ, ಧ್ಯಾನ, ಯೋಗ, ಅಧ್ಯಯನ, ಭಜನೆ, ಸಂಗೀತ ಮುಂತಾದ ವಿಷಯಗಳನ್ನು ಕೊಟ್ಟಿದ್ದಾರೆ. ಯೋಗವನ್ನು " ಚಿತ್ತ ವೃತ್ತಿ ನಿರೋದಕ " ಎಂದು ಪರಿಭಾಷಿಸಿದ್ದಾರೆ ಎಂದಮೇಲೆ, ಮನಸ್ಸನ್ನು ಸುಮ್ಮನಾಗಿಸಬೇಕಾದ ಕಾರಣವೂ ಅವರಿಗೆ ಗೊತ್ತಿತ್ತು ಎಂದು ಅರ್ಥವಲ್ಲವೇ? ಮನಸ್ಸಿನ ಶಬ್ದ ಜಂಗುಳಿ ಕಡಿಮೆಯಾದರೆ ಅಥವಾ ಮನಸ್ಸು ಒಂದು ಸಮಯದಲ್ಲಿ ಯಾವುದಾದರೂ ಒಂದೇ ವಿಷಯದ ಮೇಲೆ ಸಕಾರಾತ್ಮಕವಾಗಿ ಕೇಂದ್ರೀಕೃತವಾದರೆ, ಅದು ಧ್ಯಾನವಾಗುತ್ತದೆ. ಧ್ಯಾನದಲ್ಲಿ ಅನವಶ್ಯಕವಾದ ಶಬ್ಧಗಳೆಲ್ಲ ಶಾಂತವಾಗಿ, ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ಮೊದಮೊದಲು ಜಾಗೃತವಾಗಿರುವಾಗ ಮಾತ್ರ ಶಾಂತವಾಗಿದ್ದು ನಿದ್ದೆ ಬಂದಂತಾಗಿ, ಆ ಆಲೋಚನೆಗಳು ಕನಸಿನಲ್ಲಿ ತಮ್ಮ

	किलकिलने गोरगोरने किरिचि कूगुत्तिहुवु । नेलेयेल्लि निद्देगेलो? - मंकुतिम्म ॥ २०३ ॥		ಸೋಲುತ್ತಾ, ಹೊಸ ಹೊಸ ಪಟ್ಟುಗಳನ್ನು ಹಾಕುತ್ತಾ, ತಮ್ಮೊಳಗೆ ತಾವೇ ಗುದ್ದಾಡುವ, ವಿವೇಕದೊಡನೆ ಮತ್ತು ಬುದ್ಧಿಯೊಡನೆ ಗುದ್ದಾಡುವ ಸಾವಿರಾರು ಯೋಚನೆಗಳ ಆಗರವೇ ನಮ್ಮ ಮನಸ್ಸಿನ ಹಂದರ. ವಾಸ್ತವಿಕವಾಗಿ ಯಾವ ಶಬ್ದವೂ ಆಗದಿದ್ದರೂ ನಮಗೆ ನಮ್ಮ ಮನದಲ್ಲಿ, ಗಿಳಿ – ಕಾಗೆ – ಗೂಬೆ – ಕೋಗಿಲೆಯಂತಹ ಪಕ್ಷಿಗಳು ಒಂದೇ ಬಾರಿ ಕೂಗಿದರೆ ಆಗುವ ಕಲರವವಾದಂತೆ ಭಾಸವಾಗುತ್ತದೆ . ಈ ಶಬ್ದಗಳೇ ಹಲ ವಿಧವಾದ ಆಲೋಚನೆಗಳಂತೆ ನಮ್ಮ ಮನಸ್ಸಿನಲ್ಲಿ ಹೊಕ್ಕು ರಾದ್ದಾಂತ ಮಾಡುತ್ತಿರುತ್ತದೆ. ಅಂತಹ ಕಲಸುಮೆಲೋಗರವಾದ ಆಲೋಚನೆಗಳ ಗೂಡಿನಲ್ಲಿ ಶಬ್ದವೆಲ್ಲಾ ಸ್ಥಬ್ದವಾಗಿ ನಮಗೆ ನಿದ್ದೆ ಬರುವುದು ಸಾಧ್ಯವೇ ಎಂದು ಕೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಕಗ್ಗದಲ್ಲಿ.	ರುದ್ರನರ್ತನ ಮಾಡುತ್ತವೆ. ಆದರೆ ಧ್ಯಾನ ಧೀರ್ಘ ಮತ್ತು ದೃಢವಾದಾಗ ನಮಗೆ ಸಂಪೂರ್ಣ, ಕನಸಿಲ್ಲದ (ಸಾವಿನಂತ) ನಿದ್ದೆ ಬರುತ್ತದೆ.ವಾಚಕರೆ, ಈ ಮೇಲೆ ಹೇಳಿದ ಎಲ್ಲ ವಿಷಯಗಳೂ ನಿಮ್ಮೆಲ್ಲರ ಮನಸ್ಸುಗಳಲ್ಲೂ ಎಂದಾದರೂ ಬಂದಿರಬಹುದು. ಆದರೆ ನಾವೆಲ್ಲಾ ಸಾಮಾನ್ಯ ಮನುಷ್ಯರು. ನಮ್ಮ ಮನಸ್ಸನ್ನು ತಹಬಂದಿಗೆ ತಂದುಕೊಳ್ಳುವ ಸಾಮರ್ಥ್ಯ ಇದ್ದರೂ ಕೇವಲ ಪ್ರಯತ್ನದ ಕೊರತೆಯಿಂದ ನಮಗೆ ಅದು ಸಾಧ್ಯವಾಗುವುದಿಲ್ಲ. ನಾವೂ ಸಹ ಪ್ರಯತ್ನಪಟ್ಟರೆ, ಅದು ಅಸಾಧ್ಯವಲ್ಲ.
06	ದೇವಾಂಶ ಪಶ್ವಂಶಗಳ ಗಂಟು ಮಾನುಷತೆ । ಧೀವಿಮರ್ಶೆಯಿನೊಂದ ಸತ್ಕರಿಸಿ ಬಲಿಸಿ ॥ ಭಾವಪರಿಶೋಧನೆಯಿನಿನ್ನೊಂದ ದಂಡಿಪುದೆ । ಜೀವಪ್ರಕರ್ಷಗತಿ - ಮಂಕುತಿಮ್ಮ ॥ ೨೦೪ ॥	"A human life is a complex mixture of elements of Gods and Demons. One must use his intellect to know and recognise the divine elements and	ದೇವತೆಗಳಿಗಿರುವ ಗುಣಗಳ ಮತ್ತು ಪಶುಗಳಿಗಿರುವ ಗುಣಗಳ ಮಿಶ್ರಣವೇ ಮನುಷ್ಯಗುಣ. ತನ್ನ ಬುದ್ಧಿಶಕ್ತಿಯನ್ನು ಉಪಯೋಗಿಸಿ ಪಶುಗುಣಗಳನ್ನು	ಹಲವಾರು ಜನ್ಮಗಳಲ್ಲಿ, ಹಲವಾರು ದೇಹಗಳನ್ನು ಧರಿಸಿ, ಅವುಗಳ ಗುಣಗಳನ್ನು ತನ್ನದಾಗಿಸಿಕೊಂಡಿರುವ ಮನುಷ್ಯನಲ್ಲಿರುವ ಚೇತನ ಸಂಪೂರ್ಣವಾಗಿ ತನ್ನ ಹಳೆಯ ವಾಸನೆಗಳನ್ನು ಬಿಡದ ಕಾರಣ ಮನುಷ್ಯನಲ್ಲಿ ಆ ಪಶುಗುಣಗಳು ಇರುತ್ತವೆ. ಆದರೆ ಎಲ್ಲ ಪ್ರಾಣಿಗಳಿಗಿಂತ ಉತ್ತಮ ದೇಹವನ್ನು ಹೊಂದಿರುವ ಮನುಷ್ಯ ದೈವೀಗುಣಗಳನ್ನೂ

Dēvāṁśa paśvaṁśagaḷa gaṇṭu mānuṣhatē.
Dhīvimarśeyinoṇḍa satkarisi balisi ॥

Bhāvapariśōdhaneyinin noṅda daṇḍipude.
Jīvaprakarṣhagati — Mankutimma ॥ 204 ॥

देवांश पश्वंशगळ गंटु मानुषते ।
धीविमर्शेयिनोंद सत्करिसि बलिसि ॥
भावपरिशोधनेयिनिन्नोंद दंडिपुदे ।
जीवप्रकर्षगति - मंकुतिम्म ॥ २०४ ॥

nurture them to be strong. One must also know his inner feelings to recognise the demonic elements and curb them to keep them under check. This is the only way he can make progress in his life." - Mankutimma

ಕರಗಿಸುತ್ತಾ ದೈವೀಗುಣಗಳನ್ನು ಹೆಚ್ಚಿಸಿ ಕೊಳ್ಳುವುದೇ ಪ್ರಕರ್ಷ, ಎಂದರೆ ಪ್ರಗತಿ ಎಂದು ಈ ಕಗ್ಗದಲ್ಲಿ ಮಾನ್ಯ ಗುಂಡಪ್ಪನವರು ಪ್ರಸ್ತಾಪಿಸುತ್ತಾರೆ.

ಹೊಂದಿರುತ್ತಾನೆ. ಆದರೆ ಪ್ರತಿ ಮನುಷ್ಯನಲ್ಲೂ ಈ ಎರಡೂ ಗುಣಗಳ ಪರಿಮಾಣ ಮತ್ತು ಪ್ರಮಾಣ ಬೇರೆ ಬೇರೆಯದಾಗಿರುತ್ತದೆ. ಹಾಗಾಗಿ ಪ್ರತೀ ಮನುಷ್ಯನ ನಡವಳಿಕೆಯೂ ಈ ಗುಣಗಳು ಮತ್ತು ಅವುಗಳ ಪ್ರಮಾಣ ಪರಿಮಾಣಗಳಗನುಗುಣವಾಗಿಯೇ ಇರುತ್ತದೆ.ತನ್ನ ಜೀವನವನ್ನು ಸುಂದರವಾಗಿ ರೂಪಿಸಿಕೊಳ್ಳಲು ಮನುಷ್ಯನಿಗೆ ಅನ್ಯ ಪ್ರಾಣಿಗಳಿಗಿಂತ ಅಧಿಕವಾದ ಬುದ್ಧಿಶಕ್ತಿಯನ್ನು ಆ ಪರಮಾತ್ಮ ಕರುಣಿಸಿದ್ದಾನೆ. ಅದನ್ನು ಉಪಯೋಗಿಸಿಕೊಂಡು ತನ್ನಲ್ಲಿರುವ ಪಶು ಗುಣಗಳನ್ನು ಕಡಿಮೆ ಮಾಡಿಕೊಳ್ಳುತ್ತಾ, ದೈವೀ ಗುಣಗಳನ್ನು ಹೆಚ್ಚು ಮಾಡಿಕೊಳ್ಳುವ ಪ್ರಯತ್ನವನ್ನು ಮನುಷ್ಯ ಮಾಡಿದರೆ ಅದು ಪ್ರಗತಿಯಾಗುತ್ತದೆ. ಹಾಗೆ ಪಶುಗುಣಗಳನ್ನು ಸಂಪೂರ್ಣವಾಗಿ ನೀಗಿಸಿಕೊಂದರೆ ಮನುಷ್ಯ "ಮಾನವ" ನಾಗುತ್ತಾನೆ ಎಂಬುದೇ ಈ ಕಗ್ಗದ ಹೂರಣ.ಆದರೆ ವಸ್ತುಸ್ಥಿತಿಯೇ ಬೇರೆಯಾಗಿದೆ. ಈ ಜಗತ್ತಿನ ಆಕರ್ಷಣೆಯಲ್ಲಿ ಮನುಷ್ಯ ವಿವೇಚನೆಯನ್ನು ತೊರೆದು, ಸ್ವಾರ್ಥದಿಂದ ತನ್ನಲ್ಲಿರುವ ಪಾಶವೀ ಗುಣಗಳನ್ನು ಅಧಿಕವಾಗಿಸಿಕೊಳ್ಳುತ್ತಿದ್ದಾನೆ. ಇವನ ದುರಾಸೆಗೆ ಅಂತ್ಯವೇ ಇಲ್ಲವೆಂಬಂತೆ, ಎಲ್ಲಿ ನೋಡಿದರೂ ಭಾಷೆ, ಜಾತಿ, ಧರ್ಮ, ನೀರು, ನೆಲ, ಆಕಾಶ, ಸಮುದ್ರಗಳ ಇತ್ಯಾದಿ ಕಾರಣದಿಂದ ಪ್ರಪಂಚದ ಯಾವುದಾದರೊಂದು ಮೂಲೆಯಲ್ಲಿ ಪ್ರತಿ ನಿತ್ಯ ಕದನ ಮತ್ತು ಹೋರಾಟ ನಡೆದೇ ಇರುತ್ತದೆ. "ಪಶುಗುಣಗಳನ್ನು ಸಂಪೂರ್ಣವಾಗಿ ಪಡೆದ ಆ ಪಶುಗಳಿಗಿಲ್ಲದ ಪಾಶವೀ ಭಾವದಿಂದ ಮನುಷ್ಯ ತನ್ನ ಜೀವನವನ್ನು ನರಕವಾಗಿಸಿಕೊಂಡಿದ್ದಾನೆ. ಜಗತ್ತಿನ ಜನರೆಲ್ಲಾ ಈ ಬಗ್ಗೆ ಆಲೋಚನೆ ಮಾಡಬೇಕಾದ ಪರಿಸ್ಥಿತಿ ಬಂದಿದೆ."ನಾವು ಏಕೆ ಹೀಗೆ, ಶಾಂತವಾಗಿ, ಸುಂದರವಾಗಿ ಬಾಳಲು ನಮಗೆ ಸಾಧ್ಯವಿಲ್ಲವೇ" ಎಂದು ಯೋಚಿಸಬೇಕಾಗಿದೆ.ಪ್ರತಿ ವ್ಯಕ್ತಿಯೂ ಬದಲಾಗಿ, ಇಡೀ ಸಮಾಜವೇ ಬದಲಾಗಿ, ಈ ಜಗತ್ತು ಎಲ್ಲರೂ ಶಾಂತಿಯಿಂದ ಬಾಳಲು ಆಗುವಂತೆ ಬದಲಾಗಬೇಕು. ಅದರ ಪ್ರಯತ್ನ

				ನಮ್ಮಿಂದಲೇ ಮೊದಲಾಗಬೇಕಲ್ಲವೇ? ಆತ್ಮಾವಲೋಕನಕ್ಕೆ ಇದು ಸರಿಯಾದ ಸಮಯವಲ್ಲವೇ?
07	ಬೆದಕಾಟ ಬದುಕೆಲ್ಲ; ಚಣಚಣವು ಹೊಸ ಹಸಿವು। ಅದಕಾಗಿ ಇದಕಾಗಿ ಮತ್ತೊಂದಕಾಗಿ ॥ ಅಧಿಕಾರ ಸಿರಿ ಸೊಗಸು ಕೀರ್ತಿಗಳ ನೆನೆದು ಮನ। ಕುದಿಯುತಿಹುದಾವಗಂ - ಮಂಕುತಿಮ್ಮ ॥ ೨೦೮ ॥ बेदकाट बदुकेल्ल; चणचणवु हॊस हसिवु। अदकागि इदकागि मत्तॊंदकागि ॥ अधिकार सिरि सॊगसु कीर्तिगळ नॆनॆदु मन। कुदियुतिहुदावगं - मंकुतिम्म ॥ २०८ ॥ **Bedakāṭa badukella;** **chaṇachaṇavu hosa hasivu.** **Adakāgi idakāgi mattondakāgi ॥** **Adhikāra siri sogasu** **kīrtigaḷa nenedu mana.** **Kudiyutihudāvagaṁ — Mankutimma ॥ 208 ॥**	"Life is a struggle all along. Every second we have new hunger. For this, for that and for something else. Sometimes it is for power, or wealth, or splendor, or fame. Mind is always restless thinking about them." - Mankutimma	ಪ್ರತೀ ಕ್ಷಣವೂ ನಾವುಗಳೆಲ್ಲ ಹೊಸ ಹೊಸ ಯೋಜನೆಗಳು, ಯೋಚನೆಗಳು, ಆಸೆಗಳು, ಆಕಾಂಕ್ಷೆಗಳನ್ನು ಹೊತ್ತು, ಇದನ್ನೋ, ಅದನ್ನೋ ಅಥವಾ ಮತ್ತ್ಯಾವುದನ್ನೋ ಪಡೆಯುವುದಕ್ಕೆ ಪರದಾಡುತ್ತಿರುತ್ತೇವೆ. ಈ ಪರದಾಟ, ಅಧಿಕಾರ ಸಂಪತ್ತು, ಅಂದ ಚೆಂದ ಅಥವಾ ಕೀರ್ತಿಗಳಂತಹ ವಿಚಾರಗಳನ್ನು ನೆನೆದು ನಮ್ಮ ಮನಸ್ಸುಗಳು ಕುದಿಯುತ್ತಿರುತ್ತವೆ ಎಂಬ ವಿಷಯವನ್ನು ಮಂಡಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಕಗ್ಗದಲ್ಲಿ.	ನಮ್ಮ ಈ ಪರದಾಟ ಬೆದಕಾಟಗಳು ಅಧಿಕಾರಕ್ಕಾಗಿ, ಸಿರಿವಂತಿಕೆಗೆ, ಅಂದ ಚೆಂದಗಳಿಗೆ, ಕೀರ್ತಿಯ ಆಸೆಗಾಗಿ ಇನ್ನೂ ಹತ್ತು ಹಲವಾರು ಕಾರಣಗಳಿಗೆ ನಡೆಯುತ್ತಲೇ ಇರುತ್ತದೆ. ಈ ಬೆದಕಾಟಗಳಲ್ಲಿ ಮನುಷ್ಯ ತನ್ನ ಆಸೆಗಳನ್ನು ಪೂರೈಸಿಕೊಳ್ಳುವ ಹಾದಿಯಲ್ಲಿ ಯಾವ ಯಾವ ವೇಷಗಳನ್ನು ಹಾಕುತ್ತಾನೆ, ಎಂತೆಂತಹ ಮಾರ್ಗಗಳನ್ನು ತುಳಿಯುತ್ತಾನೆ, ಹೇಗೆಲ್ಲಾ ತನ್ನ ಬುದ್ಧಿಯನ್ನು ಉಪಯೋಗಿಸುತ್ತಾನೆಂಬುದು ಪ್ರತಿಯೊಬ್ಬರ ಅನುಭವಕ್ಕೂ ಬಂದಿರುತ್ತದೆ. ಈ ಕಾರಣಗಳಿಗಾಗಿಯೇ, ಈ ಜಗತ್ತಿನಲ್ಲಿ ಒಂದು ಮುಖ , ಪೈಪೋಟಿ, ಹೊಡೆದಾಟ, ಕೊಲೆ, ಕೊಳ್ಳೆ, ದರೋಡೆ, ಬೆದರಿಕೆ, ಅಪಹರಣಗಳಂತಹ ವೈಯಕ್ತಿಕ ಅಪರಾಧಗಳು ಮತ್ತು ಆಕ್ರಮಣ, ಯುದ್ಧ, ಭಯೋತ್ಪಾದನೆ ಮುಂತಾದ ಸಾಮೂಹಿಕ ಅಪರಾಧಗಳಿಂದ ಕೂಡಿದ್ದರೆ ಮತ್ತೊಂದು ಮುಖ ಪ್ರೇಮ, ಪ್ರೀತಿ, ಸೌಹಾರ್ದತೆ, ಭ್ರಾತೃತ್ವ, ಮಿತ್ರತ್ವ, ಮುಂತಾದ ಸಕಾರಾತ್ಮಕವಾದ ನಡವಳಿಕೆಗಳಿಂದ ಕೂಡಿದೆ. ಇವೆರಡಕ್ಕೂ ಮಾನವ ಇತಿಹಾಸದಲ್ಲಿ ಹೇರಳವಾದ ಉದಾಹರಣೆಗಳು ದೊರೆಯುತ್ತವೆ.ಪ್ರತೀ ನಿಮಿಷವೂ ನಮ್ಮಲ್ಲಿ ಹೊಸ ಹೊಸ ಆಸೆಗಳು ಅಲೆ ಅಲೆಯಂತೆ ಹುಟ್ಟುತ್ತಲೇ ಇರುತ್ತವೆ. ನಾವು ಆ ಆಸೆಗಳನ್ನು ಸಾಕಾರಗೊಳಿಸಿಕೊಳ್ಳಲು ಪ್ರಯತ್ನಪಡುತ್ತಲೇ ಇರುತ್ತೇವೆ. ಹಲವು ಬಾರಿ ನಮಗೆ ಯಶಸ್ಸೂ ದೊರಕುತ್ತದೆ. ಹಲವು ಬಾರಿ ನಾವು ನಿರಾಶರಾಗುತ್ತೇವೆ. ನಿತ್ಯವೂ ನಮ್ಮ ಆಸೆಗಳನ್ನು ತೀರಿಸಿಕೊಳ್ಳಲು ಪರದಾಡುತ್ತೇವೆ. ಇದನ್ನೇ ಮಾನ್ಯ ಗುಂಡಪ್ಪನವರು " ಬೆದಕಾಟ ಬದುಕೆಲ್ಲ; ಚಣಚಣವು" ಎಂದು ನಾವು ಪಡುವ ಪರದಾಟವನ್ನು ಅಣಕವಾಡುತ್ತಾರೆ. ಇದು ವಸ್ತು ಸ್ಥಿತಿ. ಇದರಲ್ಲೇನೂ ತಪ್ಪಿಲ್ಲ. ಇದು ಈ ಜಗತ್ತಿನಲ್ಲಿ ವಿಧಿಗನುಗುಣವಾಗಿ ಪ್ರತಿಯೊಬ್ಬರ

				ಕರ್ಮಗಳ ಅನುಸಾರವಾಗಿ ನಡೆಯುತ್ತಿರುತ್ತದೆ.ಈ ಬೆದಕಾಟವಿದ್ದಷ್ಟು ದಿನವೂ ಮನುಷ್ಯ ಸದಾಕಾಲ ಅವಶ್ಯಕವಾಗಿಯೋ ಅಥವಾ ಅನಾವಶ್ಯಕವಾಗಿಯೋ ಈ ಜಗತ್ತಿಗೆ ಅಂಟಿಕೊಂಡು ಸಕ್ರಿಯನಾಗಿರುತ್ತಾನೆ.ಇದೂ ಸಹಜವೇ. ಆದರೆ ಈ ಸಕ್ರಿಯತೆ, ನಮ್ಮನ್ನು ನಾವು ಈ ಜಗತ್ತಿನ ಅಂಟನ್ನು ಕಡಿಮೆ ಮಾಡಿಕೊಳ್ಳಲು, ಜ್ಞಾನ ವೃದ್ಧಿ ಮಾಡಿಕೊಳ್ಳಲು, ಆಕಾರಗಳಿಂದ ಸಿಗುವ ಆನಂದಕ್ಕಿಂತ ನಿರಾಕಾರಾನಂದವನ್ನು , ನಿಜಾನಂದವನ್ನು ಪಡೆಯಲು ಬೇಕಾದ ಜ್ಞಾನ ಮತ್ತು ಅನುಭವವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಪಟ್ಟರೆ ಇಹಕ್ಕೂ ಮತ್ತು ಪರಕ್ಕೂ ಸಹಾಯವಾಗುತ್ತದೆ. ಈ ಜಗತ್ತು ನಮ್ಮ ಇಂದ್ರಿಯಗಳನ್ನು ಆಕರ್ಷಿಸುತ್ತದೆ ಮತ್ತು ನಾವು ಈ ಇಂದ್ರಿಯಗಳ ಸೆಳೆತಕ್ಕೆ ಆಕರ್ಷಣೆಗೆ ಒಳಗಾಗುತ್ತೇವೆ. ಈ ಆಕರ್ಷಣೆಯೇ ನಮ್ಮನ್ನು ” ಪರದಾಡುವಂತೆ ಅಥವಾ ಬೆದಕಾಡುವಂತೆ” ಮಾಡುತ್ತದೆ. ನಾವು ಎಷ್ಟು ಕಡಿಮೆ ಈ ಜಗತ್ತಿಗೆ ಅಂಟಿಕೊಂಡರೆ ಅಷ್ಟು ಸುಖ. ಇದನ್ನು ಪ್ರತಿಯೊಬ್ಬರೂ ಅವರವರದೇ ರೀತಿಯಲ್ಲಿ ಅರ್ಥಮಾಡಿಕೊಂಡು ಅವರವರ ಪ್ರಯತ್ನ ಪಡಬೇಕು. ಪ್ರಯತ್ನ ಪಟ್ಟರೆ ಹಿತ, ಇಲ್ಲದಿದ್ದರೆ ಈ “ಪರದಾಟ-ಬೆದಕಾಟ”ವೇ ನಮ್ಮ ನಿತ್ಯ ಪರಿಪಾಟವಾಗಿಬಿಡುತ್ತದೆ.
08	ಅಸಮದಲಿ ಸಮತೆಯನು ವಿಷಮದಲಿ ಮೈತ್ರಿಯನು । ಅಸಮಂಜಸದಿ ಸಮನ್ವಯ ಸೂತ್ರ ನಯವ ॥ ವೆಸನಮಯ ಸಂಸಾರದಲಿ ವಿನೋದವ ಕಾಣ್ಬ । ರಸಿಕತೆಯೆ ಯೋಗವಲೊ - ಮಂಕುತಿಮ್ಮ ॥ ೨೪೧ ॥ **Asamadali samateyanu viṣamadali maitriyanu. Asamanjasadi samanvaya**	"One attains inner peace when he can see oneness among the dissimilar, when he respects friendship even in the face of danger, when one can come up with a recipe for harmony in chaos, when he is tasteful to find humour in this world filled with misery." -	ಸಮವಲ್ಲದ ವಿಷಯದಲಿ ಸಮತೆಯನು ಕಾಣುವುದು,ವಿಷಮದಲಿ ಸ್ನೇಹವನು ಕಾಣುವುದು,ಸಮಂಜಸವಲ್ಲದರಲ್ಲಿ ಸಮನ್ವಯದ ಸೂತ್ರವನ್ನು ಹೆಣೆಯುವುದು, ಸಂಕಷ್ಟಗಳೇ ತುಂಬಿರುವ ಈ ಸಂಸಾರದಲ್ಲಿ ವಿನೋದವನ್ನು ನಗೆಯನ್ನು ಕಾಣುವಂಥಾ ರಸಿಕತೆಯೇ,ಯೋಗವೆಂದು ತಿಳಿಯಬೇಕು ಎಂದು	ಹಲವಾರು ಅಸಮತೆಗಳಿಂದ ಕೂಡಿರುವುದೇ ಈ ಸೃಷ್ಟಿಯ ವೈಶಿಷ್ಟ್ಯ . ಇದು ಪರಮಾತ್ಮನ ಸೃಷ್ಟಿ. ನಮಗೆ ಇಲ್ಲಿರುವ ಎಷ್ಟೋ ಅಸಮತೆಗಳು,ನಮಗೆ ಇಷ್ಟವಾಗುವುದಿಲ್ಲ. ಎಷ್ಟೋ ವಿಷಯಗಳು "ಸರಿಯಿಲ್ಲ" ಎನ್ನುವ ಅಭಿಪ್ರಾಯ ನಮ್ಮೆಲ್ಲರಲ್ಲೂ ಇರುತ್ತದೆ. ಸಹಜವಾಗಿ ಸಾಮಾನ್ಯ ಮನುಷ್ಯರೆಲ್ಲಾ ಯೋಚನೆ ಮಾಡುವುದೇ ಹೀಗೆ. ಯಾರೊಟ್ಟಿಗಾದರೂ ನಮಗೆ ವೈರವುಂಟಾದರೆ, ಅದನ್ನು ನಾವು ಆಜೀವ ಪರ್ಯಂತ ಸಾಧಿಸುತ್ತೇವೆ. ಆ ವೈರದಿಂದ ಪ್ರತೀ ಸಣ್ಣ ಅವಕಾಶದಲ್ಲೂ ವೈರಿಯನ್ನು ಮಣಿಸಲು ಮತ್ತು ಸೋಲಿಸಲು ಪ್ರಯತ್ನಿಸುತ್ತೇವೆ. ದ್ವೇಷದ ಅಗ್ನಿ ನಮ್ಮನ್ನು

sūtra nayava ‖ **Vesanamaya saṁsāradali vinōdava kāṇba. Rasikateye yōgavalo — Mankutimma ‖ 241 ‖** असमदलि समतेयनु विषमदलि मैत्रियनु । असमंजसदि समन्वय सूत्र नयव ॥ वेसनमय संसारदलि विनोदव काण्ब । रसिकतेये योगवलो - मंकुतिम्म ॥ २४१ ॥	Mankutimma	ಒಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಕಗ್ಗದಲ್ಲಿ.	ಸುಡುತ್ತಿರುತ್ತದೆ. ಆದರೆ ವೈರದ ಭಾವಗಳು ನಮ್ಮ ಮನಸ್ಸಿನಲ್ಲಿ ಉಂಟಾಗುವ ಸಂಭವವಿದ್ದಾಗ್ಯೂ, ಶಾಂತರಾಗಿ ಸುಮನಸ್ಕರಾಗಿ ವೈರಿಗೂ ಸ್ನೇಹದ ಹಸ್ತವನ್ನು ನೀಡಿದರೆ ನಿಮ್ಮ ವೈರಿಯಲ್ಲೂ ಸ್ನೇಹದ ಭಾವ ಉಂಟಾಗಬಹುದು.ಇನ್ನು ಒಂದಕ್ಕೊಂದು ಹೊಂದಿಕೊಳ್ಳದ ಅಂದರೆ ಸಮಂಜಸವಲ್ಲದ ವಿಷಯಗಳು ಅಥವಾ ಸಂಧರ್ಭಗಳಲ್ಲಿ ಎಲ್ಲ ಭಿನ್ನತೆಗಳನ್ನೂ ಒಂದು ಕಡೆ ಸೇರಿಸಿ, ಒಂದಕ್ಕೊಂದು ಸಮನ್ವಯವಾಗುವಂತೆ ಮಾಡುವುದು ಸಾಹಸವೇ ಸರಿ. ಹಲವಾರು ಸಂಕಷ್ಟಗಳ ವ್ಯಸನ ಮತ್ತು ನೋವಿನಿಂದ ಕೂಡಿದ ಈ ಜಗತ್ತಿನಲ್ಲಿ ಅವುಗಳನ್ನೆಲ್ಲ ಅಂತರ್ಯದಲ್ಲಿ ಅನುಭವಿಸುತ್ತಿದ್ದರೂ, ತಾನೂ ನಗುತ್ತಾ ಎಲ್ಲರನ್ನೂ ನಗಿಸುತ್ತಾ ವಿನೋದದಿಂದ ಕಳೆಯುವ ಪ್ರವೃತ್ತಿ ಯಾರಿಗೂ ಲಕ್ಷಕ್ಕೊಬ್ಬನಿಗೆ ಇರಬಹುದು.ಹೀಗೆ, ಅಸಮತೆಯಲ್ಲಿ ಸಮತೆಯನ್ನು ಕಾಣುವುದು ಅಥವಾ ಅಸಮತೆಯನ್ನು ಸಮವಾಗಿಸುವುದು, ವೈರಿಯಲ್ಲೂ ಮಿತ್ರತ್ವವನ್ನು ತೋರುವುದು ,ಸಮಂಜಸವಲ್ಲದ್ದನ್ನು ಸಮನ್ವಯಗೊಳಿಸುವುದು, ಕಷ್ಟಗಳಲ್ಲಿಯೂ ಸಂತೋಷವಾಗಿರುವುದು, ಈ ರೀತಿಯ ಗುಣಗಳು ಇದ್ದಲ್ಲಿ ಅವನನ್ನು ಯೋಗಿ ಎನ್ನಬಹುದು ಎನ್ನುತ್ತಾರೆ ಮಾನ್ಯ ಡಿ.ವಿ.ಜಿ. ಆದರೆ ಪ್ರಕೃತಿಯಲ್ಲಿ ಎಲ್ಲವೂ ಉಂಟು. ನಾವು ಈ ಇಂದ್ರಿಯಪ್ರಚೋದಿತವಾದ ದೇಹ, ಮನಸ್ಸು ಬುದ್ಧಿಗಳನ್ನು ಹೊತ್ತಿರುವಾಗ ಈ ರೀತಿಯ ಸಮಭಾವಗಳು ಬರುವುದು ಕಷ್ಟ ಆದರೆ ಅಸಾಧ್ಯವಲ್ಲ. ಸಂತ್ಸಂಗ, ಅಧ್ಯಯನಗಳಿಂದ, ಅಂತರ್ಯದಲ್ಲಿ ಸದ್ಭಾವಗಳನ್ನು ಬೆಳೆಸಿಕೊಂಡಲ್ಲಿ "ಆತ್ಮವತ್ ಸರ್ವಭೂತೇಷು" ಎನ್ನುವಂತೆ ಎಲ್ಲದರಲ್ಲೂ ಒಳ್ಳೆಯದನ್ನು, ಸಮಭಾವವನ್ನು, ಪ್ರೀತಿಯನ್ನು, ಆನಂದವನ್ನು ಕಾಣುವಂತ ಮನೋಭಾವ ಬೆಳೆಸಿಕೊಳ್ಳಬಹುದು. ಅಂತಹ ಪ್ರಯತ್ನಕ್ಕೆ ಯೋಗವೆನ್ನುತ್ತಾರೆ ಮಾನ್ಯ ಗುಂಡಪ್ಪನವರು. ಅಂತಹ ಪ್ರಯತ್ನವನ್ನು ನಾವೂ ಮಾಡಿದರೆ, ನಾವೂ ಯೋಗಿಗಳಾಗಬಹುದು.

Illuminating Roads to Introspection

CHIRANTANA
Institute of Introspective Studies

ನಯದಿಂದ ಸೋಕು, ನೀಂ
ದಯೆಯಿಂದ ನೋಡದನು ।
ಭಯದಿನೋಲಗಿಸು, ನೀಂ
ಪೂಜೆಗೈಯದನು ॥
ಸ್ವಯಮಂಕುರಿತ ಸಕಲ
ವಿಶ್ವಸತ್ತ್ವವೊ; ಜೀವ ।
ಪ್ರಿಯತಮವೊ ಸೃಷ್ಟಿಯಲಿ -
ಮಂಕುತಿಮ್ಮ ॥ ೨೭೪ ॥

Nayadinda sōku, nīṁ
dayeyinda nōḍadanu.
Bhayadinōlagisu, nīṁ
pūjegaiyadanu ॥

Svayamaṅkurita sakala
viśvasattvavo; jīva.
Priyatamavo sṛṣṭiyali
—
Mankutimma ॥ 274 ॥

नयदिंद सोकु, नीं दयेयिंद
नोडदनु ।
भयदिनोलगिसु, नीं पूजेगैयदनु
॥
स्वयमंकुरित सकल
विश्वसत्त्ववो; जीव ।
प्रियतमवो सृष्टियलि -
मंकुतिम्म ॥ २७४ ॥

"The life that you have is part of the cosmic spirit that resides in your body. You have to treat it with love and compassion. You should be very wary of doing anything that would hurt it. You should worship it. Life inside us should be the most loved thing in this creation." - Mankutimma

ಜೀವವೆನ್ನುವುದು ಸಮಸ್ತ ಸೃಷ್ಟಿಯಲಿ ಅತೀ ಪ್ರಿಯತಮವು. ಅದು ತಾನೇ ತಾನಾಗಿ ‘ಆಗಿ’ ಸೃಷ್ಟಿಯ ಸಮಗ್ರ ಸತ್ವದಿಂದ ಕೂಡಿದೆ. ಹಾಗಾಗಿ ಅದನ್ನು ನಯದಿಂದ ಸ್ಪರ್ಶಿಸು, ದಯೆಯಿಂದ ನೋಡು, ಭಯದಿಂದ ಓಲೈಸು ಮತ್ತು ಸದಾಕಾಲ ಅದನ್ನು ಪೂಜೆ ಮಾಡು, ಎಂದು ಆತ್ಮ ತತ್ವವಾದ ವಿಚಾರ ಮಂಡಿಸಿದ್ದಾರೆ ಮಾನ್ಯ ಗುಂಡಪ್ಪನವರು.

ಪರಮಾತ್ಮನನ್ನು ‘ಸ್ವಯಂಭೂ’ ಎನ್ನುತ್ತಾರೆ. ಎಂದರೆ ‘ತಾನೇ ತಾನಾಗಿ’ ಆದದ್ದು ಎಂದು ಅರ್ಥ.ಅಷ್ಟೇ ಅಲ್ಲ ಅದು "ಪರಮ" ಆತ್ಮ. ಎಂದರೆ ಎಲ್ಲ ಆತ್ಮಗಳಿಗೂ ಮಿಗಿಲಾಗಿ ಉನ್ನತ ಸ್ಥಾನದಲ್ಲಿರುವುದೇ ಪರಮಾತ್ಮ. ಆ ಪರಮಾತ್ಮನ ಒಂದಂಶವೇ ಈ ಜೀವಾತ್ಮ. ಹಾಗಾಗಿ ಆತ್ಮವೂ ಪೂಜಾರ್ಹ. ಪೂರ್ವ ಸಂಚಿತ ಕರ್ಮಗಳನ್ನು ದೇಹದಿಂದ ದೇಹಕ್ಕೆ ತೆಗೆದುಕೊಂಡು ಹೋಗುವ ವಾಹಕವಿದು. ಇದು ಎಷ್ಟು ಶುದ್ಧವಾಗಿದ್ದರೆ ನಮ್ಮ ಪ್ರಯಾಣ ಅಷ್ಟು ಸುಗಮವಾಗಿರುತ್ತದೆ. ಇದನ್ನು ನಯ, ವಿನಯ ಮತ್ತು ಭಯದಿಂದ ನೋಡಿಕೊಳ್ಳಬೇಕು ಎನ್ನುವುದೇ ಈ ಕಗ್ಗದ ಹೂರಣ

ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ,ನಮ್ಮ ಬದುಕನ್ನು "ರಥಂ ವಿದ್ಧಿ" ಎನ್ನುತ್ತಾನೆ ಈ ರಥದ ಯಜಮಾನ ಅಥವಾ ರಥಿಕನೇ ‘ಆತ್ಮ’. ಸಾರಥಿಯೇ ‘ಬುದ್ಧಿ’ಮತ್ತು ಅವನ ಕೈಲಿರುವ ಲಗಾಮೇ’ಮನಸ್ಸು’ ಈ ರಥವನ್ನು ಎಳೆಯುವ ಕುದುರೆಗಳೇ ‘ ಕಾಮ ಕ್ರೋಧ ಲೋಭ ಮೋಹ ಮದ ಮಾತ್ಸರ್ಯ’ಗಳಾದ ಅರಿಷಡ್ವರ್ಗಗಳು.ಎಲ್ಲಿಯತನಕ ಈ ಕುದುರೆಗಳು ಮನಸ್ಸೆಂಬ ಲಗಾಮಿನ ಮೂಲಕ, ಬುದ್ಧಿಯೆಂಬ ಸಾರಥಿಯ ಹಿಡಿತದಲ್ಲಿರುತ್ತದೆಯೋ ಅಲ್ಲಿಯತನಕ ಯಜಮಾನನಾದ ‘ಆತ್ಮ’ ತನ್ನ ಗಮ್ಯವನ್ನು ಸುಲಭವಾಗಿ ಸೇರಿಕೊಳ್ಳುತ್ತದೆ. ಆದರೆ ಸಾರಥಿಯಾದ ಬುದ್ಧಿಯ ಹಿಡಿತವಿಲ್ಲದೆ ಕುದುರೆಗಳು ಹಿಡಿತಕ್ಕೆ ಸಿಗದೇ ಓಡಿದರೆ, ಆಗ ಕುದುರೆಗಳು ಎಲ್ಲಿಗೆ ಎಳೆದುಕೊಂಡು ಹೋಗುತ್ತವೆಯೋ ಅಲ್ಲಿಗೆ ರಥ ಓಡುತ್ತದೆ ಆಗ ಆತ್ಮ ಸೊರಗುತ್ತದೆ. ಕರ್ಮದ ಭಾರ ಹೊತ್ತು ಸೊರಗುತ್ತದೆ.

ಸದ್ವಸ್ತುಗಳನ್ನು,ಸತ್ಸಂಗ ಸದ್ವಿಚಾರಗಳನ್ನು, ಸದ್ಸಂಸ್ಕಾರಗಳನ್ನು ಬೆಳೆಸಿಕೊಂಡು ನಮ್ಮ ಬದುಕಿನ ಒಡೆಯನಾದ ‘ ಆತ್ಮ’ನನ್ನು ಪರಮಾತ್ಮನೇ ಎಂದು ಅರಿತು ಈ ಎಲ್ಲ ಸದ್ವಸ್ತು,ಸತ್ಸಂಗ,ಸದ್ವಿಚಾರ,ಸದ್ಸಂಸ್ಕಾರಗಳಿಂದ ಅದನ್ನು ಅಲಂಕರಿಸಿ ಪೂಜಿಸಬೇಕು.

				ಶುದ್ಧವಾಗಿಟ್ಟುಕೊಳ್ಳಬೇಕು.ಆಗ ಬದುಕಿನ ರಥ ಸರಿಯಾದ ದಿಕ್ಕಿನಲ್ಲಿ ಓಡಿ ಆತ್ಮನಲ್ಲಿ ಸೇರಬೇಕೋ ಅಲ್ಲಿಗೆ ಹೋಗಲು ಸುಗಮವಾಗುತ್ತದೆ. ನಮ್ಮ ಪ್ರಯತ್ನ, ಗುರುಕೃಪೆ ಮತ್ತು ಪರಮಾತ್ಮನ ದಯೆಯಿಂದ ಅದು ಸಾಧ್ಯವೆಂದು ಅನಿಸುತ್ತದೆ. ನಮ್ಮ ನಮ್ಮ ಆತ್ಮಗಳನ್ನು ಶುದ್ಧವಾಗಿಟ್ಟುಕೊಳ್ಳುವ, ಪ್ರಯತ್ನವನ್ನು ನಾವು ಮಾಡಲೇ ಬೇಕು.
10	ಅನ್ನದಾತುರಕಿಂತ ಚಿನ್ನದಾತುರ ತೀಕ್ಷ್ಣ। ಚಿನ್ನದಾತುರಕಿಂತ ಹೆಣ್ಣುಗಂಡೊಲವು ॥ ಮನ್ನಣೆಯ ದಾಹವೀಯೆಲ್ಲಕಂ ತೀಕ್ಷ್ಣತಮ। ತಿನ್ನುವುದದಾತ್ಮವನೆ - ಮಂಕುತಿಮ್ಮ ॥ ೬೫೨ ॥ **Annadāturakinta chinnadātura tīkṣṇa. Chinnadāturakinta heṇṇugaṇḍolavu ॥** **Mannaṇeya dāhavīyellakaṁ tīkṣṇatama. Tinnuvudadātmavane — Mankutimma ॥ 652 ॥** अन्नदातुरकिंत चिन्नदातुर तीक्ष्ण । चिन्नदातुरकिंत हेण्णुगंडोलवु ॥ मन्नणेय दाहवीयेल्लकं तीक्ष्णतम । तिन्नुवुददात्मवने - मंकुतिम्म ॥ ६५२ ॥	The longing for gold is stronger than that for food. Stronger than that is the longing of lovers for each other. Longing for fame is stronger than all of these. It has the ability to eat one's own soul." - Mankutimma	ಅನ್ನವನ್ನು ಪಡೆಯಬೇಕು ಎನ್ನುವ ತೀವ್ರತಮ ಬಯಕೆಗಿಂತ ಚಿನ್ನದಮೇಲಿನ ಆಸೆಯ ತೀವ್ರತೆ ಹೆಚ್ಚು, ಅದಕ್ಕಿಂತ ತೀವ್ರ ಹೆಣ್ಣುಗಂಡಿನ ಪರಸ್ಪರ ಆಕರ್ಷಣೆಯ ತೀವ್ರತೆ. ಇವೆಲ್ಲಕ್ಕಿಂತ ಮೀರಿದುದು ಮನ್ನಣೆಯ, ಪ್ರಚಾರದ ಆಸೆ. ಈ ಎಲ್ಲ ಆಸೆಗಳು ಆತ್ಮವನ್ನು ಕೊರಗಿಸಿ, ಸೊರಗಿಸಿ ತಿನ್ನುತ್ತವೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.	ಬದುಕಿಗೆ ಮೂಲ ಅವಶ್ಯಕತೆ ಆಹಾರ. ಅದನ್ನು ಪಡೆಯಲು ಮನುಷ್ಯ ಹಲವಾರು ಕೆಲಸಗಳನ್ನು ಮಾಡುತ್ತಾನೆ ಮತ್ತು ಕೆಲವರು ಏನನ್ನೂ ಮಾಡದೆಯೇ ಪರಾವಲಂಬಿಗಳಾಗಿ ಉಣಿಸನ್ನು ಪಡೆಯುತ್ತಾರೆ ಎಂಬುದು ಸರ್ವವಿಧಿತ ವಿಚಾರ. ಒಮ್ಮೆ ಈ ಅನ್ನದ ಆತುರ ತಣಿದುಬಿಟ್ಟರೆ ಮನಸ್ಸು ನಾನಾ ರೀತಿಯ ಆಸೆಗಳ ಕಡೆಗೆ ನಾಗಾಲೋಟದಲ್ಲಿ ಓಡುತ್ತದೆ. ಹಣವನ್ನು ಕೂಡಿಡುವ, ಕೂಡಿಟ್ಟ ಹಣವನ್ನು ಬೆಳೆಸುವ, ಬೆಳೆಸಿದ್ದನ್ನು ಮತ್ತಷ್ಟು ಬೆಳೆಸುವ ಮತ್ತು ಅದು ಎಷ್ಟು ಬೆಳೆದರೂ ತೃಪ್ತಿಯಾಗದ ಅಥವಾ ಆ ಬೆಳೆಸುವ ಓಟದಲ್ಲಿ ಅಕಸ್ಮಾತ್ ಎಡವಿ ಇದ್ದದ್ದನ್ನು ಕಳೆದುಕೊಂಡರೆ, ಬೇತಾಳವನ್ನು ಛಲಬಿಡದ ತ್ರಿವಿಕ್ರಮನಂತೆ ಮತ್ತೆ ಮತ್ತೆ ಪ್ರಯತ್ನವನ್ನು ಪಡುತ್ತಲೇ ಇರುವುದೇ ಮನುಷ್ಯ ಸ್ವಭಾವ. ಈ ಛಲ, ಆಸೆಗಳ ತೀವ್ರತೆ ಅವುಗಳನ್ನು ಪಡೆಯಲು ಓದುವ ಓಟದ 'ವ್ಯರ್ಥತೆ' ಕಡೆಗೂ ಅರ್ಥವಾಗುವುದೇ ಇಲ್ಲ.ಚಿನ್ನದಾತುರ, ಎಂದರೆ ಸಂಪತ್ತಿನ ಆಸೆಯನ್ನು ಪೂರೈಸಿಕೊಳ್ಳಲು ಅವರವರ ಮಿತಿಯಲ್ಲಿ ಸಾಮರ್ಥ್ಯವಿರುತ್ತದೆ. ಆದರೆ ಇದಕ್ಕಿಂತ ಹೆಚ್ಚಿನ ತೀವ್ರತೆಯಲ್ಲಿರುವುದು ಹೆಣ್ಣುಗಂಡಿನ ಪರಸ್ಪರ ಆಕರ್ಷಣೆ. ಈ ಆಕರ್ಷಣೆಯ ಪರಿಣಾಮವಾಗಿ ಚರಿತ್ರೆಯಲ್ಲಿ ನಡೆದ ಘಟನೆಗಳು ಈ ಆಕರ್ಷಣೆಯ ಪ್ರಭಾವ ಮತ್ತು ಮಹತ್ವವನ್ನು ತೋರುತ್ತದೆ ಅಲ್ಲವೇ? ಮೇಲೆ ಹೇಳಿದ ಎರಡನ್ನೂ ಮೀರಿಸುವುದು ಮನ್ನಣೆಯ ಆಸೆ. ಮೇಲಿನ ಎರಡಕ್ಕೂ ಮಿತಿಯಿರಬಹುದು ಅಥವಾ ಮಿತಿಯನ್ನು ಹಾಕಿಕೊಳ್ಳಬಹುದು. ಆದರೆ ಮನ್ನಣೆಯ ಆಸೆ ಇವೆರದಕ್ಕಿಂತಲೂ ಬಹಳ ತೀಕ್ಷ್ಣ. ಮನ್ನಣೆಯ ಆಸೆಗೆ ಬಿದ್ದವನು ಅದನ್ನು ಪಡೆಯಲು ಏನನ್ನು

ಬೇಕಾದರೂ ಮಾಡಲು ಹೇಸುವುದಿಲ್ಲ. ಅದನ್ನು ಪಡೆಯಲು ಎಂತಹ ಹೀನ ಕೃತ್ಯವನ್ನಾದರೂ ಮಾಡಲು ಹಿಂಜರಿಯುವುದಿಲ್ಲ. ಮಣ್ಣಿನ ಆಸೆಗೆ ಬಿದ್ದವನು ತನ್ನ ಹೆಂಡಿ ಮಕ್ಕಳು, ಬಂಧು ಬಳಗ ಆಸ್ಥಿ ಪಾಸ್ತಿ ಎಲ್ಲವನ್ನೂ ತೆರೆಯಲು ತಯಾರಾಗಿಬಿಡುತ್ತಾನೆ. ಇದರ ದೃಷ್ಟಾಂತಗಳೂ ನಮಗೆ ಪುರಾಣಗಳಲ್ಲಿ ಮತ್ತು ಚರಿತ್ರೆಯಲ್ಲಿ ಹೇರಳವಾಗಿ ಸಿಗುತ್ತದೆ.ಮೇಲಿನ ಮೂರೂ ಆಸೆಗಳನ್ನು ಪೂರೈಸಿಕೊಳ್ಳುವ ಪ್ರಯತ್ನದಲ್ಲಿ ಮನುಷ್ಯ ತನ್ನ ಸಂಸ್ಕಾರಗಳನ್ನು ಕಳೆದುಕೊಂಡು ಇತರರಿಗೆ ಮತ್ತು ತನಗೂ ಘಾಸಿಮಾಡಿಕೊಳ್ಳುತ್ತಾನೆ. ತೃಪ್ತಿಯಿಲ್ಲದೆ,ಮತ್ತಷ್ಟರಾಸೆಯಲಿ ನಲುಗಿ ಹೋಗುತ್ತಾನೆ. ಮಾನಸಿಕವಾಗಿ ಬಹಳ ಹಿಂಸೆಯನ್ನು ಅನುಭವಿಸುತ್ತಾ, ಬುದ್ಧಿಮಾಂದ್ಯನಾಗುತ್ತಾನೆ. ಯುಕ್ತಽಯುಕ್ತತೆಯ ವಿವೇಚನೆಯನ್ನು ಕಳೆದುಕೊಂಡು ಮಾಡಬಾರದ ಕೆಲಸಗಳನ್ನು ಮಾಡುತ್ತಾ ಧರ್ಮವಿರುದ್ಧವಾಗಿ ಬದುಕುತ್ತಾನೆ. ಹಾಗೆ ಬದುಕುವಾಗ ಬದುಕಿಗೆ ಮೂಲ ಆಧಾರವಾದ ‘ ಆತ್ಮ ‘ ಏನನ್ನು ಪಡೆಯಬೇಕೋ ಅದನ್ನು ಪಡೆಯಲಾಗದೆ, ಎಲ್ಲಿಗೆ ಸೇರಬೇಕೋ ಅಲ್ಲಿಗೆ ಸೇರಲಾಗದೆ, ವಿಲಿವಿಲಿ ಒದ್ದಾಡುತ್ತಾ ಸೊರಗುತ್ತದೆ. ಇದನ್ನೇ ಮಾನ್ಯ ಗುಂಡಪ್ಪನವರು " ತಿನ್ನುವುದಾತ್ಮವನೆ" ಎಂದರು. ಸಾಮಾನ್ಯವಾಗಿ, ಈ ಆಸೆಗಳ ಕಾರಣವಾಗಿ ಜಗತ್ತಿನ ಜನರು ಎಷ್ಟು ಕಷ್ಟಪಡುತ್ತಾರೆ ಎನ್ನುವ ದೃಷ್ಟಾಂತಗಳನ್ನು ನೋಡುತ್ತಿದ್ದರೂ, ತಾವೂ ಸಹ ಈ ಆಸೆಗಳ ವಿಷವೃತ್ತದಲ್ಲಿ ಸಿಲುಕಿ ತಾವೂ ಅನುಭವಿಸದ ಹೊರತು ಯಾರಿಗೂ ಅರಿವು ಮೂಡುವುದೇ ಇಲ್ಲ. ನಮಗೆ ಅಂತಹ ಅರಿವು ಮೂಡಿ ನಾವು ನಮ್ಮ ಆಸೆಗಳನ್ನು ನಮ್ಮ ಸಾಮರ್ಥ್ಯಗಳ ಮಿತಿಯಲ್ಲಿ ಇಟ್ಟುಕೊಳ್ಳಲಾದರೆ ನಾವೇ ಧನ್ಯರೆಂದು ಅಂದುಕೊಳ್ಳಬೇಕು.